ವಿಜೃಂಭಿಸುವಂತೆ ಮಾಡಿತು. ಶಿವರಾವನ ಮುಖ್ಯ ಕೇಂದ್ರಗಳು ಬಜಾರು, ಸ್ಟೇಷನ್ನು, ಸಂತೆ. ಆ ಮೂರರಲ್ಲಿ ಯಾವುದರ ಕಡೆ ಹೋದರೂ ಒಂದು ವಾರಕ್ಕಾಗುವಷ್ಟು ಸರಕು ತಂದುಕೊಳ್ಳೋನು. ದೊಡ್ಡವರ ಜೊತೆಗೆ ವಿನಯ ವಿಧೇಯತೆಗಳನ್ನು ನಟಿಸೋನು. ಕಳ್ಳತನ ಮಾಡ್ತಾ ಸಿಕ್ಕಿಬಿದ್ದಾಗ ಮನೆಯಲ್ಲಿಯ ಬಡತನ, ಅಪ್ಪ ಅಮ್ಮನ ಅಸಹಾಯಕತೆ, ತಂಗಿಯರು, ತಮ್ಮಂದಿರು, ಅಜ್ಜಿ ಎಲ್ಲರೂ ಹೇಗೆ ಅವಸ್ಥೆ ಪಡ್ತಿದ್ದಾರೆ, ಯಾವ ಕಾರಣಕ್ಕಾಗಿ ತಾನೀ ಕಳ್ತನ ಮಾಡಬೇಕಾಗಿ ಬಂತೆಂಬುದನ್ನು ಕರುಣಾಜನಕವಾಗಿ ಹೇಳೋನು. ತಮ್ಮದು ಒಂದೊಮ್ಮೆ ಚೆಂದಗೆ ಬಾಳಿ ಬದುಕಿದ ಕುಟುಂಬವೆಂದು ಕೂಡಾ ಹೇಳೋನು. ಅವರ ಸಹಾನುಭೂತಿ ಗಳಿಸಿಕೊಳ್ಳೋನು. ಎಲ್ಲೂ ಏನೂ ಸಿಗದ ದಿನ ಮನೆಯಲ್ಲಿ ಸಿಕ್ಕದ್ದನ್ನು ಮಾಡಿಕೊಂಡುಬಿಡೋನು.

ಅದೆಲ್ಲಾ ನೆನಪಿಸಿಕೊಂಡರೆ ಮೈ ಜುಮುಗರಿಸುತ್ತೆ ಶಿವರಾವುಗೆ.

ಟಿಂಬರ್ ಡಿಪೋದ ಆಕಡೆ ಈಕಡೆ ರಾವು ಅವರ ಬೀದಿಯಲ್ಲಿ ಕಟ್ಟಿದ ಮನೆಗಳ ಕಡೆ ಆಶ್ಚರ್ಯದಿಂದ ನೋಡಿದ ಶಿವರಾವು. ಹದಿನೈದು ವರ್ಷಗಳ ಹಿಂದೆ ಈ ಏರಿಯಾ ನಿರ್ಜನವಾಗಿರೋದು. ರಾತ್ರಿ ಏಳು ಗಂಟೆಯಾದ ಮೇಲೆ ದೊಡ್ಡವರು ಕೂಡ ಈ ಕಡೆ ಬರ್ತಿರಲಿಲ್ಲ. ಆಗ ಎಂಟು ಗಂಟೆ ನಂತರ ತಾನೊಬ್ಬನೇ ಈ ಕಡೆ ಬರೋನು. ತನ್ನ ಧೈರ್ಯಕ್ಕೆ ಬೆಚ್ಚಿಬೀಳುವ ಮುದುಕಪ್ಪನ ಕಡೆ ನೋಡಿ ನಾಚಿಕೊಂಡು, ಆನಂದಪಡೋನು ಶಿವರಾವು.

ತುಂತುರಾಗಿ ಸುರೀತಿದ್ದ ಮಳೆ ಮತ್ತಿಷ್ಟು ಜೋರಾಯಿತು. ಅದರೊಂದಿಗೆ ಬೀಸ್ತಿದ್ದ ಚಳಿಗಾಳಿ ಮಳೆ ಇನ್ನೂ ಜೋರಾದಂತೆ ಭ್ರಮೆ ಮೂಡಿಸಿತು. ಶಿವರಾವು ಇವೆಲ್ಲಕ್ಕೂ ಅತೀತವಾದವನಂತೆ, ಸಣ್ಣಗೆ ಆದರೆ ಎಲ್ಲೂ ನಿಲ್ಲದೆ ನಡೆಯುತ್ತಿದ್ದಾನೆ.

ಅಮ್ಮ ದಿನಾ ಗೋಳಾಡೋಳು. ಕಣ್ಣೀರು ಸುರಿಸೋಳು. ತಾನು ಕಳ್ತನ ಮಾಡಿ ಸಿಕ್ಕಿಬಿದ್ದು ಏಟು ತಿಂದು ಬಂದ ದಿನ ತನ್ನನ್ನು ತಬ್ಬಿಕೊಂಡು ಹೋ ಎಂದು ಅಳೋಳು. ಒಂದಿನಾನೂ ಬಯ್ತಿರಲಿಲ್ಲ. ಹೊಡಿತಿರಲಿಲ್ಲ. ಕಣ್ಣೀರು ಸುರಿಸಿ ಕೈ ಮುಗಿದು ಕೇಳೋಳು. ಇಂಥ ಕೆಲಸ ಮಾಡಿದ ಮಾಮನಿಗೆ ಒಮ್ಮೆ ಹೊಡೆದ ಪರಿಣಾಮವಾಗಿ ಆತ ಕೆಲವು ದಿವಸ ಮನೆ ಬಿಟ್ಟು ಓಡಿ ಹೋಗಿದ್ದನಂತೆ. ಕೆಲವು ದಿವಸಗಳವರೆಗೆ ಆತನ ಹುಡುಕಿ ತೆಗೆಯೋವರೆಗೆ ಆತನ ಅಪ್ಪ ಅಮ್ಮ ಪಟ್ಟ ಅವಸ್ಥೆ ಅಷ್ಟಿಷ್ಟಲ್ಲವಂತೆ. ಕೊನೆಗೆ ಎಷ್ಟೋ ಖರ್ಚು ಮಾಡಿ, ಇನ್ನೆಷ್ಟೋ ಕಷ್ಟ ಪಟ್ಟ ಮೇಲೆ ಆತ ಸಿಕ್ಕನಂತೆ. ಈ ವಿಷಯ ಯಾವಾಗಲೋ ಮಾತಿನ ಮಧ್ಯೆ ಶಿವರಾವು ಕೇಳಿಸಿಕೊಂಡಿದ್ದ. ಅದಕ್ಕೇ ತನ್ನನ್ನು ಅಮ್ಮ ಹೊಡೀತಿಲ್ಲ ಅಂತ ಕೆಲವು ದಿವಸಗಳಾದ ಮೇಲೆ ಅರ್ಥ ಮಾಡಿಕೊಂಡ.

ಅಪ್ಪ ಏನೂ ಅಂತಿರಲಿಲ್ಲ. ಯಾವಾಗಲೂ ಉಬ್ಬಸ ರೋಗ. ಚಳಿಗಾಲ, ಮಳೆಗಾಲಗಳಲ್ಲಿ ಮೇಲಿಂದ ಮೇಲೆ ಕೆಲಸ ತಪ್ಪಿಸೋನು. ದಿನವೆಲ್ಲ ಕಂಬಳಿ ಹೊದ್ದು ಮಲಗಿರೋನು. ಬಿಸಿಲಲ್ಲೇ ಕುಂತಿರೋನು. ತಾನಲ್ಲದೆ ಅಕ್ಕ, ಮೂವರು ತಂಗಿಯರು, ಇಬ್ಬರು ತಮ್ಮಂದಿರು. ಅಕ್ಕನಿಗೆ ಮದಿವಿ ಆಯ್ತು. ಆದ ಮರುವರ್ಷದಿಂದ್ಲೇ ಮತ್ತೆ ಮನೆ ಸೇರಿಕೊಂಡುಬಿಟ್ಳು. ಮೊದಮೊದಲು ಅಕ್ಕನ ದೌರ್ಭಾಗ್ಯಕ್ಕೆ ಅಮ್ಮ ದಿನಾ ಅಳೋಳು. ಭಾವ ಸತ್ತು ಹೋದ ಆಕಸ್ಮಿಕವಾಗಿ.

ಮಳೆ ಸ್ವಲ್ಪ ನಿಂತಂತಾಗಿ ಮತ್ತೆ ಶುರುವಾಯ್ತು. ತನಗೆ ಚೆನ್ನಾಗಿ ಪರಿಚಯವಿದ್ದ ಮನೆಗಳು ಸ್ವಲ್ಪ ಸಣ್ಣವಾದಂತೆ ಅನಿಸಿತು. ಶಿವರಾವು ಮುಂದೆ ಸಾಗಿದ. ಗೋಡೆಗಳ ಮೇಲಿನ ಪೋಸ್ಟರ್ಸ್ ನೋಡಿ ಊರಲ್ಲಿ ಮೂರು ಸಿನಿಮಾ ಟಾಕೀಸುಗಳಿರುವುದನ್ನು ತಿಳಿದುಕೊಂಡ. ಕಾಲೇಜುಗಳು, ಟ್ಯುಟೋರಿಯಲ್ ಕಾಲೇಜುಗಳು, ಹೋಟೆಲುಗಳು ಮುಂತಾದವು ಬೆಳೆದುದನ್ನು ಗೋಡೆಗಳ ಮೇಲಿನ ಚಿತ್ರಗಳನ್ನಾಧರಿಸಿ ಊಹಿಸಿಕೊಂಡ.

ಬಸ್‌ಸ್ಟ್ಯಾಂಡು ದಾಟಿದ. ಚಳಿಯಿತ್ತು. ಚೆನ್ನಾಗಿ ತೋಯ್ದು ಹೋಗಿದ್ದ ಶಿವರಾವು. ಬಹುಶಃ